ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 109-114
©IIMRD, Mysuru
www.iimrd.com

# ಉನ್ನತ ಶಿಕ್ಷಣದಲ್ಲಿ ಶಿಕ್ಷಕರ ಪ್ರಾಮುಖ್ಯತೆ ಮತ್ತು ಹೊಣೆಗಾರಿಕೆ

**ಡಾ. ಕುಮಾರ ಬೆಳಲೆ[1] ಮತ್ತು ಡಾ. ಶಿವಕೀರ್ತಿ ವಿ[2]**
[1]ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಾರ್ಥ ನಗರ, ಮೈಸೂರು.
[2]ಸಹ ಪ್ರಾಧ್ಯಾಪಕರು, ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೊಳ್ಳೇಗಾಲ

**ಸಾರಾಂಶ: (Abstract)**

*ಉನ್ನತ ಶಿಕ್ಷಣದ ಗುಣಮಟ್ಟವನ್ನು ನಿರ್ಧರಿಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಕರು ಕೇವಲ ಜ್ಞಾನವನ್ನು ಬೋಧಿಸುವವರಾಗಿರದೆ, ವಿದ್ಯಾರ್ಥಿಗಳ ಬೌದ್ಧಿಕ, ನೈತಿಕ ಮತ್ತು ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸುವ ಮಾರ್ಗದರ್ಶಕರಾಗಿದ್ದಾರೆ. ಬದಲಾಗುತ್ತಿರುವ ಶೈಕ್ಷಣಿಕ ಪರಿಸರದಲ್ಲಿ ಆಧುನಿಕ ಬೋಧನಾ ವಿಧಾನಗಳು, ತಂತ್ರಜ್ಞಾನ ಮತ್ತು ಸಂಶೋಧನಾ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವುದು ಶಿಕ್ಷಕರ ಪ್ರಮುಖ ಹೊಣೆಗಾರಿಕೆಯಾಗಿದೆ. ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ, ಸಂಶೋಧನಾ ಮನೋಭಾವ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ. ಶಿಕ್ಷಕರ ವೃತ್ತಿಪರ ಬದ್ಧತೆ, ನಿರಂತರ ಜ್ಞಾನಾರ್ಜನೆ, ಪರಿಣಾಮಕಾರಿ ಬೋಧನೆ ಮತ್ತು ವಿದ್ಯಾರ್ಥಿ–ಕೇಂದ್ರಿತ ದೃಷ್ಟಿಕೋನವು ಉನ್ನತ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುತ್ತದೆ. ಆದ್ದರಿಂದ, ಗುಣಮಟ್ಟದ ಉನ್ನತ ಶಿಕ್ಷಣ ಮತ್ತು ಜ್ಞಾನಾಧಾರಿತ ಸಮಾಜ ನಿರ್ಮಾಣಕ್ಕಾಗಿ ಶಿಕ್ಷಕರ ಪ್ರಾಮುಖ್ಯತೆ ಹಾಗೂ ಅವರ ಹೊಣೆಗಾರಿಕೆಗಳನ್ನು ಸಮಗ್ರವಾಗಿ ಪರಿಗಣಿಸುವುದು ಅಗತ್ಯವಾಗಿದೆ.*

**ಮುಖ್ಯಪದಗಳು (Keywords):** *ಉನ್ನತ ಶಿಕ್ಷಣ, ಶಿಕ್ಷಕರ ಪಾತ್ರ, ಶಿಕ್ಷಕರ ಹೊಣೆಗಾರಿಕೆ, ಗುಣಮಟ್ಟದ ಶಿಕ್ಷಣ, ವಿದ್ಯಾರ್ಥಿ ಅಭಿವೃದ್ಧಿ*

## ಪೀಠಿಕೆ

'ಅಕ್ಕರವ ಕಲಿತಾತ ಒಕ್ಕಲನು ತಿನಕಲಿತ, ಲೆಕ್ಕವ ಕಲಿತ ಕರಣಿಕನು ನರಕದಲಿ ಹೊಕ್ಕಿರಲು ಕಲಿತ ಸರ್ವಜ್ಞ' ಈ ಮಾತು ಇಂದಿನ ಕಲಿತವರ ಗುಣವನ್ನು ಮತ್ತು ವಿಚಾರವನ್ನು ಚಿತ್ರಿಸುತ್ತದೆ. ಅಷ್ಟೇ ಅಲ್ಲ ಶಿಕ್ಷಣಗಳ ಗುರಿ ಯಾವುದಾಗಿರಬೇಕು ಎಂದು ತಿಳಿಸುವುದರೊಂದಿಗೆ ಸಮಾಜದಲ್ಲಿ ಶಿಕ್ಷಕರ ಹೊಣೆಗಾರಿಕೆ ಮತ್ತು ಮಹತ್ವವನ್ನು ಪ್ರತಿಪಾದಿಸಿ 'ಶಿಕ್ಷಣ ಕಲಿತವನ ಜಾತಿ ಮಾನವ ಜಾತಿಯಾಗಿರಬೇಕು. ಶಿಕ್ಷಣ ಕಲಿತವನ ಮತ ದೇವ ಮತವಾಗಿರಬೇಕು. ಶಿಕ್ಷಣ ಕಲಿತವನ ಕಾಲ ಸರ್ವಕಾಲವಾಗಿರಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ.

ಹಸಿವು, ಬಡತನ, ರೋಗರುಜಿನ, ಮನುಷ್ಯ ಅಪಮಾನ ಹಾಗೂ ನಿರುದ್ಯೋಗ ಮುಂತಾದ ಸಮಸ್ಯೆಗಳ ವಿರುದ್ಧ ಹೋರಾಟ ಮಾಡಲು ನಮಗೆ ಜ್ಞಾನಿಗಳು, ವಿಜ್ಞಾನಿಗಳು ಮತ್ತು ಕೌಶಲಕಾರರು

***Please cite this article as:*** ಕುಮಾರ ಬೆಳಲೆ ಮತ್ತು ಶಿವಕೀರ್ತಿ, ವಿ. (2026). ಉನ್ನತ ಶಿಕ್ಷಣದಲ್ಲಿ ಶಿಕ್ಷಕರ ಪ್ರಾಮುಖ್ಯತೆ ಮತ್ತು ಹೊಣೆಗಾರಿಕೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 109–114

ಬೇಕಾಗಿದ್ದಾರೆ. ಹಾಗಾಗಿ ವಿಶ್ವವಿದ್ಯಾನಿಲಯಗಳು ವಿದ್ಯಾವಂತರನ್ನು, ಶಾಸ್ತ್ರಗ್ರಂಥ ಪರಿಣಿತರನ್ನು ಸಮಾಜಕ್ಕೆ ನೀಡಬೇಕು. ಮಾನವಿಕ ಹಾಗೂ ವಿಜ್ಞಾನಗಳ ವಿದ್ವತ್ತು ಉಳ್ಳ ಪ್ರಾಮಾಣಿಕ ವಿದ್ಯಾರ್ಥಿಗಳಿಲ್ಲದೆ ಹೋದರೆ ಯಾವ ಆಧುನಿಕ ಸಮಾಜವು ಅಭಿವೃದ್ಧಿ ಸಾಧಿಸಲಾರದು. ನಮಗೆ ಸರಿಯಾದ ಆಲೋಚನೆ ಮತ್ತು ದೂರದೃಷ್ಟಿಯಿದ್ದರೆ ಮಾತ್ರವೇ ಸಮುದಾಯಕ್ಕೆ ಏನಾದರೂ ಕೊಡುಗೆ ನೀಡಲು ಸಾಧ್ಯ.

ಶಿಕ್ಷಣ ನಮ್ಮ ಒಳನೋಟಗಳನ್ನು ಸೂಕ್ಷ್ಮಗೊಳಿಸಬೇಕು ಮತ್ತು ಜ್ಞಾನದೀವಿಗೆಯನ್ನು ವಿಸ್ತರಿಸಬೇಕು. ಅದು ನೇರ ಹಾಗೂ ನಿಖರ ದೃಷ್ಟಿಯನ್ನು ರೂಪಿಸಬೇಕು. “ಶತಮಾನಗಳಿಂದಲೂ ಆತ್ಮಬಲಕೇಂದ್ರಿತ ಜೀವನಕ್ಕೆ ಚಾಲನೆ ನೀಡುವುದೇ ನಮ್ಮ ಆದರ್ಶವಾಗಿತ್ತು. ಪದಾರ್ಥವಾದಿ ಜಗತ್ತಿನ ಮೇಲೆ ಮೇಲ್ಮೆ ಸಾಧಿಸಿದ ಆಧ್ಯಾತ್ಮಿಕ ಜಗತ್ತಿನಲ್ಲಿ ಬದುಕುತ್ತಿದ್ದೇವೆ ಎಂದು ನಮಗೆ ಹಿರಿಯರು ಉಪದೇಶ ನೀಡುತ್ತಿದ್ದರು. ಪಾಶ್ಚಾತ್ಯ ಜಗತ್ತಿನ ಶ್ರೇಷ್ಠ ಚಿಂತಕರು ಕೂಡ ಇಂಥದ್ದೇ ಅಭಿಪ್ರಾಯ ತಳೆದಿದ್ದರು. ‘ಖಾಲಿ ಪಾತ್ರೆಗೆ ನೀರು ತುಂಬುವುದಲ್ಲ; ಬದಲಾಗಿ ಆತ್ಮದ ಕಣ್ಣನ್ನು ಬೆಳಕಿನೆಡೆಗೆ ತಿರುಗಿಸುವುದು’ ಶಿಕ್ಷಣದ ಉದ್ದೇಶವೆಂದು ಪ್ಲೇಟೋ ಪ್ರತಿಪಾದಿಸಿದ. ನಮ್ಮ ದೃಷ್ಟಿ ಬೆಳಕಿನತ್ತ ತಿರುಗಿದಾಗ ನಮ್ಮೊಳಗೆ ಆತ್ಮನಿಗ್ರಹ, ಸಪ್ರೇಮ ಮೊಳೆಯುತ್ತದೆ. ಇದು ಹೊರಗಿನ ಅಧಿಕಾರದ ನಿಯಂತ್ರಣಕ್ಕಿಂತ ಭಿನ್ನವಾದುದು. ಶಿಕ್ಷಣದ ಈ ಅವಶ್ಯಕ ಅಂಶವನ್ನು ಕಡೆಗಣಿಸಿದರೆ ಬೇಜವಾಬ್ದಾರಿಯ ಮಂದಿ ನಾವಾಗುತ್ತೇವೆ; ಮಾತ್ರವಲ್ಲದೆ ಕಿಡಿಗೇಡಿಗಳಿಂದ ಶೋಷಣೆಗೆ ಒಳಗಾಗುತ್ತೇವೆ.”

ಇಂದು ಬೌದ್ಧಿಕ ದಿವಾಳಿತನವಿದೆ. ಉನ್ನತ ಮನಸ್ಸುಗಳೊಂದಿಗೆ ಸ್ಪರ್ಧಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ನಮ್ಮೊಳಗೆ ಆಂತರಿಕ ಶಿಸ್ತು ಇಲ್ಲದಿರುವುದು. ಸ್ವಾರ್ಥ, ಕುಹಕ, ವ್ಯಂಗ್ಯ, ಸಿನಿಕತನ ಮತ್ತು ಅಹಂ ನಮ್ಮನ್ನು ಆವರಿಸಿವೆ. ಶಿಕ್ಷಣಾರ್ಥಿಗಳು ಅಶಿಸ್ತಿನಿಂದ ವರ್ತಿಸಿ ಹಿಂಸೆಯಲ್ಲಿ ತೊಡಗಿವೆ. ಇದರಿಂದ ನಮ್ಮ ಯುವಕರಿಗೆ ಗೌರವವಿಲ್ಲ, ಕೀರ್ತಿಯಿಲ್ಲ. ಇಂಥ ನಡೆವಳಿಕೆ ಪ್ರಜಾಪ್ರಭುತ್ವಕ್ಕೆ ಮಾರಕ. ಇದರಿಂದ ಅತ್ಯುತ್ತಮವಾದುದನ್ನು ಸಾಧಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಿಲ್ಲ.

ಶಿಕ್ಷಕರ ಕೆಲಸ ಹೊಣೆಗಾರಿಕೆಯದ್ದು ಮತ್ತು ಆತ್ಮಬಲವನ್ನು ಹೆಚ್ಚಿಸುವಂತದ್ದು. ಇವನು ಮಾನವತೆಯ ಮೇಲೆ ನಂಬಿಕೆವುಳ್ಳವನಾಗಿರಬೇಕು. ಇವನ ಅದಮ್ಯವಾದ ಶಕ್ತಿ ಪಾಪದ ಕೊಳೆ ಕಳೆವ ಶಕ್ತಿಯಾಗಬೇಕು. ಇಂಥ ಶಕ್ತಿಯಾಗಿದ್ದವರು ಭಾರತದ ಮಾಜಿ ರಾಷ್ಟ್ರಪತಿಗಳಾದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು. ಇವರ ಬಗೆಗೆ ಇಪ್ಪತ್ತನೆಯ ಶತಮಾನದ ಮಹಾನ್ ಚಿಂತಕರಲ್ಲಿ ಬರ್ಟಾಂಡ್ ರಸಲ್‌ರ ಮಾತಿದು; “ಡಾ. ರಾಧಕೃಷ್ಣನ್ ಶ್ರೇಷ್ಠ ದೇಶವಾಗಿರುವ ಭಾರತದ ಗಣರಾಜ್ಯದ ಅಧ್ಯಕ್ಷರಾಗುತ್ತಿರುವುದು ತತ್ತ್ವಶಾಸ್ತ್ರಕ್ಕೆ ಸಂದ ಗೌರವ. ತತ್ತ್ವಶಾಸ್ತ್ರದ ನಾನು ಇದರಿಂದ ವಿಶೇಷವಾದ ಸಂತೋಷಕ್ಕೆ ಒಳಗಾಗಿದ್ದೇನೆ. ತತ್ತ್ವಜ್ಞಾನಿಗಳು ರಾಜರಾಗಬೇಕೆಂದು ಪ್ಲೇಟೋ ಬಯಸಿದ್ದ. ತನ್ನ ಅಧ್ಯಕ್ಷನಾಗಿ ಒಬ್ಬ ತತ್ತ್ವಜ್ಞಾನಿಯನ್ನು ಆರಿಸುವ ಭಾರತಕ್ಕೆ ಇದೊಂದು ಕಾಣಿಕೆ” ಎಂದಿರುವರು. ರಸಲ್‌ರ ಮಾತು ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರವನ್ನು ನೆನಪಿಸುವ ಮೂಲಕ ಅವರ ಕಾರ್ಯಕ್ಷಮತೆ, ಬೌದ್ಧಿಕ ವಿಚಾರಪರತೆ ಹಾಗೂ ಅನಿವಾರ್ಯತೆಯನ್ನು ಶ್ಲಾಘಿಸುತ್ತದೆ.

ಶಿಕ್ಷಕ ಹೊಟ್ಟೆಪಾಡಿಗೆ ತನ್ನ ವೃತ್ತಿಯನ್ನು ಮಾಡಬಾರದು. ಅದೊಂದು ಕರೆ ಎಂದೊ, ಅದು ಅಹ್ವಾನವೆಂದೊ ಅಥವಾ ಸೇವಾವೃತ್ತಿಯೆಂದೊ ಕರ್ತವ್ಯ ನಿರ್ವಹಿಸಬೇಕು. ಆತ ವಿದ್ಯಾರ್ಥಿಗಳಿಗೆ

ಕುತೂಹಲವನ್ನು ಮೂಡಿಸಿ ಜ್ಞಾನ ಸಾಹಸವನ್ನು ಅವರಲ್ಲಿ ಮೆರೆಸಬೇಕು ಮತ್ತು ಅರಳಿಸಬೇಕು. ಜಪಾನ್ ಶಿಕ್ಷಣತಜ್ಞ ಮಕಿಗುಶಿ ಹೇಳಿದಂತೆ 'ಶಿಕ್ಷಕರು ಕಿರಾಣಿ ವ್ಯಾಪಾರಿಗಾರರಾಗದೆ ಚಿಂತನ ಪರಿಣಿತರಾಗಿ ಸೇವೆ ಸಲ್ಲಿಸಬೇಕು. ಶೈಕ್ಷಣೀಕವಾಗಿ ತಂತ್ರಜ್ಞರಾಗಬೇಕೆಂದರು'. ಉರ್ದು ಕವಿ ಇಕ್ಬಾಲ್ ಅವರು 'ಜ್ಞಾನವನ್ನು ಮಾರಿ ಕುತೂಹಲವನ್ನು ಕೊಳ್ಳ. ಏಕೆಂದರೆ ಜ್ಞಾನವೆಂಬುದು ಕೇವಲ ಸೊಕ್ಕು. ಕುತೂಹಲ ನೀಡುತ್ತದೆ ಒಳನೋಟ' ಎಂದು ಅಭಿಪ್ರಾಯಿಸುವ ಮೂಲಕ ವಿದ್ಯಾರ್ಥಿಗಳಿಗೆ ಕುತೂಹಲವನ್ನು ಬೆಳೆಸುವ ಹೊಣೆಗಾರಿಕೆ ಶಿಕ್ಷಣ ಮತ್ತು ಶಿಕ್ಷಕರದ್ದು ಎಂದು ಅಭಿಪ್ರಾಯಿಸಿರುವರು.

ಸಮಾಜದಲ್ಲಿ ಸಹಭಾಗಿತ್ವವನ್ನು ಹೊಂದಿದ ಶಿಕ್ಷಕ ಬದುಕನ್ನು ಅರಿವಿನ ಬೆಳಕಿನಲ್ಲಿ ಅನ್ವೇಷಿಸಿಕೊಂಡು ಭಾರತೀಯತೆಯ ವಿನಮ್ರತೆಯ ಪ್ರತೀಕವಾಗಿ ಇರಬೇಕು. ಎಲ್ಲ ಧರ್ಮದ ಹಲವು ಮಜಲುಗಳನ್ನು, ಅದರೊಳಗಿನ ಅಂತಃಸತ್ವವನ್ನು ಅರಿತು ತಮ್ಮ ಎಲ್ಲ ಚಿಂತನೆಗಳನ್ನು ಸೊನ್ನೆಯಿಂದ ಮೊದಲು ಮಾಡಿಕೊಂಡು ಬಲವರ್ಧನೆಪಡಿಸಿಕೊಳ್ಳಬೇಕು. ಅವನ ಭಾಷಣಗಳು ಮತ್ತು ಲೇಖನಗಳು ಮಾಣಿಕ್ಯದ ದೀಪ್ತಿಯಂತೆ ವಿದ್ಯಾರ್ಥಿಗಳನ್ನು ಉದ್ದೀಪನೆಗೊಳಿಸಬೇಕು. ಅವರ ಕೃತಿಗಳಲ್ಲಿ ಧರ್ಮಶಾಸ್ತ್ರದ ಉಪದೇಶಗಳು ಮುತ್ತು ಮಾಣಿಕ್ಯಗಳಾಗಿ ಬಂಧಿಸಲ್ಪಟ್ಟು ದೇಶದ ಬಹುಸಂಸ್ಕೃತಿಗೆ ಹೊಸ ಮೆರಗನ್ನು ನೀಡುವಂತಿರಬೇಕು. ಶಿಕ್ಷಕರು ಎಲ್ಲ ಘಟ್ಟಗಳಲ್ಲಿಯೂ ವಿದ್ಯಾರ್ಥಿಗಳಿಗೆ ಮತ್ತು ಸಮಾಜಕ್ಕೆ ಮಾದರಿಯಾಗಿ, ಹೃದಯವಂತರು ಆಗಿರಬೇಕು. ಇವರು ಸಮಾಜದ ಎಲ್ಲ ರಂಗದಲ್ಲಿ ಕಾರ್ಯ ನಿರ್ವಹಿಸುವ ಜನಕ್ಕೆ ಪ್ರಭಾವ ಮತ್ತು ಪ್ರೇರಣೆ ನೀಡಬೇಕು.

ಶಿಕ್ಷಕನೊರ್ವ ಅಧ್ಯಾತ್ಮಿಕ ಜೀವಿಯಾಗಿದ್ದು ತನ್ನ ವಿದ್ಯಾರ್ಥಿಗಳಿಗೆ ಮಾದರಿಯಾಗಿರಬೇಕು. ಈ ದೇಶದ ಮತ್ತು ಜಗತ್ತಿನ ಭವಿಷ್ಯತ್ತಿನಲ್ಲಿ ನಂಬಿಕೆವುಳ್ಳವನಾಗಿರಬೇಕು. ಅವನು ಚೈತನ್ಯದಾಯಕ ಶಕ್ತಿಯಿರುವ ಮತ್ತು ತನ್ನನ್ನು ತಾನು ಶುದ್ಧೀಕರಿಸಿಕೊಳ್ಳುವವನಾಗಿರಬೇಕು. ಆತ್ಮಾವಲೋಕನ ಮಾಡಿಕೊಂಡ ಶಿಕ್ಷಕ ಮಾನವೀಯತೆಯ ಶಕ್ತಿಯಲ್ಲಿ, ಸಂವಿಧಾನದಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ದುಡಿಯಬೇಕು. ಶಿಕ್ಷಕ ಶಿಕ್ಷಣವನ್ನು, ಅದರ ಹೊಣೆಗಾರಿಕೆಯನ್ನು ಸದಾ ಬೆಳಗಬೇಕು ಹಾಗೂ ಅದನ್ನು ಜತನದಿಂದ ಕಾಪಾಡಿಕೊಂಡು ಬರುವಂತಿರಬೇಕು. ಶಿಕ್ಷಕರು ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣವನ್ನು ಬಲಪಡಿಸಲು ಪ್ರಯತ್ನಿಸುವವರು ಆಗಬೇಕು. ಯಾವುದೇ ಮಾದರಿಯ ಕಲಿಕೆಗೆ ಬರುವ ಶಿಕ್ಷಕರು ಬೌದ್ಧಿಕ ಪರಂಪರೆ ಮೆರಸಿ, ಅಲ್ಲಿನ ತಾಂತ್ರಿಕ ಕುಶಲವನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಹಿಸುವ ಮೂಲಕ ಶಿಕ್ಷಣವನ್ನು, ಅದರ ವ್ಯಾಪ್ತಿ ಮತ್ತು ಸಾರವನ್ನು ಉಳಿಸಬೇಕಿದೆ. ಇವರ ಬಾಂಧವ್ಯ ವಿದ್ಯಾರ್ಥಿ ಹಾಗೂ ಸಮಾಜದೊಟ್ಟಿಗೆ ಸುಧಾರಣೆಯಾಗದ ಹೊರತು ಯಾವುದೇ ಶಿಕ್ಷಣ ಕ್ಷೇತ್ರವಾಗಲಿ ಅಥವಾ ಸಮಾಜವಾಗಲಿ ಗಗನಕುಸುಮವಾಗುತ್ತದೆ ಎಂಬುದು ನಿರ್ವಿವಾದ.

ಶಿಕ್ಷಣ ವಿಭಾಗದ ಸುಧಾರಣೆಗೆ ಹುಟ್ಟಿಕೊಂಡಿರುವ ಸಂಘಗಳು, ಅಭಿವೃದ್ಧಿ ಪ್ರಾಧಿಕಾರಗಳು, ಶಿಕ್ಷಣ ಪರಿಷತ್ತುಗಳು ಹೆಸರಿಗಷ್ಟೇ ಇರುವಂತಾಗಬಾರದು. ಅದರ ಮಹತ್ವವನ್ನು, ಅದರಿಂದ ಆಗಬೇಕಾದ ಕ್ರಿಯಾಶೀಲ ಯೋಜನೆಗಳನ್ನು ಮತ್ತು ಅದರ ಉಪಯೋಗಗಳನ್ನು ಗಂಭೀರವಾಗಿ ಪರಿಗಣಿಬೇಕು.

ಯಾವುದೇ ಕುಟುಂಬ, ಸಮಾಜ, ಸರಕಾರ ಹಾಗೂ ಶಿಕ್ಷಣ ಆಯೋಗಗಳು ಶಿಕ್ಷಕನಿಗೆ ಗೌರವ ಸಲ್ಲಿಸಬೇಕು. ಅಂತಹ ಗೌರವಕ್ಕೆ ಪಾತ್ರನಾಗುವ ಗುಣಗಳನ್ನು ಶಿಕ್ಷಕನು ಕೂಡ ಬೆಳೆಸಿಕೊಳ್ಳಬೇಕು.

ರಾಧಾಕೃಷ್ಣರ ಮಾತಿನಲ್ಲೇ ಹೇಳುವುದಾದರೆ; "ಶಿಕ್ಷಕರಿಗೆ ಗೌರವನ್ನು ಯಾರು ಆದೇಶ ಮಾಡುವುದಿಲ್ಲ. ಅದನ್ನು ಅವರು ಸ್ವಸಾಮಾರ್ಥ್ಯದಿಂದ ಗಳಿಸಬೇಕು." ಶಿಕ್ಷಕರು ಅಧ್ಯಾತ್ಮಿಕ ಮತ್ತು ನೈತಿಕ ವಿಶ್ವದಲ್ಲಿ ನಂಬಿಕೆಯನ್ನು ಹೊಂದಿರಬೇಕು. ಶಿಕ್ಷಕರು ಶಿಕ್ಷಣ ನೀಡುವುದೇ ನಮ್ಮ ಪರಮಗುರಿ ಎಂದು ಭಾವಿಸಿ ಸಮಾಜದಿಂದ ಗೌರವವನ್ನು ಪಡೆಯಬೇಕು. ಇದು ಸಾಧ್ಯವಾಗದ ಹೊರತು ಅವರಿಗೆ ಮನ್ನಣೆ ಹಾಗೂ ಗೌರವಗಳೆರಡು ಸಮಾಜ ಹಾಗೂ ಸರಕಾರದಿಂದ ಸಿಗುವುದಿಲ್ಲ. ಇದನ್ನು ಶಿಕ್ಷಕರು ಮನಗಂಡಿದ್ದರೂ ಕೂಡ ವಿರೋಧದ ಪ್ರಕ್ರಿಯೆಯಲ್ಲಿ ತೊಡಗಿರುವುದು ಕಳವಳಕಾರಿಯಾದ ವಿಚಾರ.

ವಿದ್ಯಾರ್ಥಿಗಳು ಸ್ವಜ್ಞಾನ, ಸ್ವಪರಿಶೀಲನೆ, ಸ್ವವಿಮರ್ಶೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು. ಹಾಗೆಯೇ ಅವರು ತಮ್ಮನ್ನು ತಾವು ಉತ್ತಮಪಡಿಸಿಕೊಳ್ಳಲು ಒಂದಾದ ಮೇಲೊಂದು ಹೆಜ್ಜೆಯಿಡುವ ನಿರಂತರ ಸಾಹಸಕ್ಕೆ ಅವಕಾಶ ಕಲ್ಪಿಸಬೇಕು. ಯಾವ ವಿದ್ಯಾರ್ಥಿಯು ರೋಬಾಟ್ ಆಗದೆ, ತನ್ನ ಕ್ಷೇತ್ರದಲ್ಲಿ ಆಲೋಚಿಸುವಂತೆ ಅತ್ಯುತ್ತಮವಾದ ವಿಚಾರವನ್ನು ವಿದ್ಯಾರ್ಥಿಗಳಿಗೆ ನೀಡಬೇಕು. ಮತ್ತು ಅದರ ಬಗ್ಗೆ ಅವರು ಚಿಂತಿಸಿ ತಮ್ಮತಮ್ಮಲ್ಲೇ ಸ್ವಂತ ತೀರ್ಮಾನಗಳಿಗೆ ಬರುವ ಸ್ವಾತಂತ್ರ್ಯವನ್ನು ಅವರಿಗೆ ಶಿಕ್ಷಕರು ನೀಡಬೇಕು.

ಶಿಕ್ಷಣ ಮನುಷ್ಯನಿಗೆ ಎರಡನೆಯ ಹುಟ್ಟು. ಇದರಿಂದ ಅವನಲ್ಲಿ ಮಾನವೀಯ ಗುಣ ಮೈಗೊಡಿ ಮಾನವನಾಗುತ್ತಾನೆ. ಇಂತದೊಂದು ಪ್ರಕ್ರಿಯೆಯನ್ನು ಶಿಕ್ಷಣವೆನ್ನಬಹುದು. ನರಪಶುವಾದ ಹುಟ್ಟು ಮೊದಲ ಹುಟ್ಟು. ಆದರೆ ಮಾನವನಾಗಿ ಪರಿವರ್ತನೆಯಾಗುವುದು ಅವನ ಎರಡನೆಯ ಹುಟ್ಟಿನಿಂದ. ಇದು ಸಮಾಜಕ್ಕೆ ಮತ್ತು ಅದರ ಅಭಿವೃದ್ಧಿಗೆ ಪೂರಕ. ಇಂಥ ಮರುಜನ್ಮವನ್ನು ನೀಡುವುದೇ ಶಿಕ್ಷಣ ವ್ಯವಸ್ಥೆ ಮತ್ತು ಇದನ್ನು ಬೋಧನೆ ಮಾಡುವ ಶಿಕ್ಷಕ. ಈ ಕಾರಣದಿಂದಲೇ ಕೇವಲ ಶಿಕ್ಷಕನಾದವ ಗುರುವಾಗಿ ಪರಿವರ್ತನೆಯಾಗುತ್ತಾನೆ. ಹೀಗೆ ಶಿಕ್ಷಕ ಗುರುತ್ವವನ್ನು ಪಡೆದು ತನ್ನಿಂದ ವಿದ್ಯಾರ್ಥಿಗೆ ಜ್ಞಾನವೆಂಬ ಒಂದು ಭಾಗವನ್ನು ನೀಡಿ ಸತ್‌ಮಾರ್ಗದಲ್ಲಿ ಅವನನ್ನು ನಡೆಯುವಂತೆ ಪ್ರೇರೇಪಿಸಬೇಕು. ಇನ್ನುಳಿದ ಜ್ಞಾನವನ್ನು ವಿದ್ಯಾರ್ಥಿಯಾದವ ತನ್ನ ಸ್ವಬೌದ್ಧಿಕ ಪ್ರಯತ್ನದಿಂದ, ಸಹಾಧ್ಯಾಯಿಗಳಿಂದ ಹಾಗೂ ತನಗೆ ದೊರಕಿದ ಅನುಭವದಿಂದ ಇನ್ನಷ್ಟು ಮತ್ತಷ್ಟು ಜ್ಞಾನ ಶಾಖೆಗಳನ್ನು ತನ್ನೊಳಗೆ ಪಡೆದು ವಿವೇಕ, ಸತ್ಯ ಮತ್ತು ಅರಿವಿನ ಚಿಲುಮೆಯಾಗಿ, ಸಮಾಜಮುಖಿಯಾಗಿ ತೊಡಗಿಸಿಕೊಳ್ಳಬೇಕು.

ವ್ಯವಸ್ಥೆಗಳು ಲೌಕಿಕ ಶಿಕ್ಷಣವನ್ನು ನೀಡಬೇಕು. ಅದನ್ನು ಎಲ್ಲರೂ ಸ್ವಾಗತಿಸಬೇಕು. ಈ ಶಿಕ್ಷಣಗಳು ವಿವೇಕವನ್ನು ಮೊದಲು ಮಾಡಿಕೊಂಡು ವಿಜ್ಞಾನದ ವಿವೇಚನೆಯನ್ನು ಮೂಡಿಸಬೇಕು. ಅಂತೆಯೇ ವಿಜ್ಞಾನ ಸತ್ಯದ ಅನ್ವೇಷಣೆಯೇ ಹೊರತು ಅದು ಮಾನವಿಕ ವಿಭಾಗಗಳಿಗಿಂತ ಬೇರೆಯಲ್ಲ ಎಂಬುದನ್ನು ಪ್ರತಿಪಾದಿಸಬೇಕು. ಹೀಗಾದಾಗ ಮಾತ್ರ ದೇಶದಲ್ಲಿ ಶಿಕ್ಷಣ ಕ್ರಾಂತಿ ಸಾಧ್ಯ. ಪ್ರಜಾಪ್ರಭುತ್ವ ಮತ್ತು ಶಿಕ್ಷಣದ ಸಂಬಂಧ ಅಪಾರ. ಇವುಗಳ ಸಾವಯವ ಸಂಬಂಧವನ್ನು ವ್ಯವಸ್ಥೆ ಅರ್ಥಮಾಡಿಕೊಳ್ಳಬೇಕು. ಶಿಕ್ಷಣವೆನ್ನುವುದು ಕೇವಲ ಜ್ಞಾನಕ್ಕೆ, ಕೌಶಲಕ್ಕೆ ಮಾತ್ರ ಇರುವಂಥದ್ದಲ್ಲ. ಅದು ಮತ್ತೋಬ್ಬರೊಂದಿಗೆ

ಬದುಕಲು ಮಾಡುವಂತೆ ಪ್ರೇರೇಪಿಸುವಂತದ್ದು. ಶಿಕ್ಷಕರು ಶಿಕ್ಷಣ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವದ ಜೀವಸತ್ವವನ್ನು ತುಂಬಿಸಬೇಕು. ಹಾಗೇ ಮಾಡದೇ ಇದ್ದಲ್ಲಿ ಪ್ರಜಾಪ್ರಭುತ್ವದ ನಿಲುವುಗಳು ಸಾರ್ಥಕವಾಗದೆ ವಿಫಲವಾಗುತ್ತವೆ. ಈ ದೃಷ್ಟಿಯನ್ನು ಇಟ್ಟುಕೊಂಡು ಡಾ. ಅಬ್ದುಲ್ ಕಲಾಂ ಅವರು ತನ್ನ ದೇಶದ ಶಿಕ್ಷಣವನ್ನು ಸಶಕ್ತಗೊಳಿಸಲು ಅ) ಸಂಶೋಧನೆ ಮತ್ತು ಮಥನ ಆ) ಸೃಜನಶೀಲತೆ ಮತ್ತು ಅನ್ವೇಷಣೆ ಇ) ಉನ್ನತ ತಂತ್ರಜ್ಞಾನದ ಬಳಕೆ ಈ) ಕರ್ತೃತ್ವಶಾಲಿ ನಾಯಕತ್ವ ಮತ್ತು ಕೊನೆಯದಾಗಿ ಭಾರತೀಯ ಪರಂಪರೆಗೆ ಅನುಗುಣವಾಗಿ ಉ) ನೈತಿಕ ನಾಯಕತ್ವ, ನೈತಿಕ ಗುರಿ, ಬದುಕಲು ಕಲಿಯುವ ಗುರಿ ಎಂಬ ಐದು ಮಡಿಕೆಯ ಮಾದರಿಗಳನ್ನು ನೀಡಿರುವರು.

ದೇಶದ ಆತ್ಮ ಶಿಕ್ಷಣ ಸಂಸ್ಥೆಗಳಲ್ಲಿ ಅಡಗಿದೆ. ಈ ಹಿನ್ನಲೆಯಲ್ಲಿಯೇ ಕುವೆಂಪು ಜ್ಞಾನಾಲಯಗಳನ್ನು ದೇವಾಲಯ ಎಂದಿದ್ದು. ಸಮಾಜ ಉದ್ಧಾರವಾಗಲು ವಿಶ್ವವಿದ್ಯಾನಿಲಯಗಳ ಶಿಕ್ಷಣ, ಶಿಕ್ಷಕರ ಜ್ಞಾನ ಅತ್ಯುತ್ತಮ ಹಾಗೂ ಗುಣಮಟ್ಟದಾಗಿರಬೇಕು. ಇವೆರಡರೊಂದಿಗೆ ಸಮಾಜ ಹೊಂದಾಣಿಕೆ ಮಾಡಿಕೊಂಡಲ್ಲಿ ನಾಡಿನ ಮುಂದಿನ ದಿನಗಳು ಭೀಕರವಾಗುತ್ತವೆ. ಶಿಕ್ಷಣ ನೀಡುವ ಶಿಕ್ಷಣ ಸಂಸ್ಥೆಗಳು ನಾಯಿಕೊಡೆಗಳಾಂತಾಗದೆ ಜ್ಞಾನ ದೇಗುಲಗಳಾಗಬೇಕು ಮತ್ತು ಜ್ಞಾನಕೊಡೆಗಳಾಗಬೇಕು. ಇದರೊಳಗೆ ಮಾನವನ ಸಾವಯವ ಸಂಬಂಧಕ್ಕೆ, ಅವನ ಮೇಲ್ಮಟ್ಟದ ಆಲೋಚನೆಗೆ ಅವಕಾಶವಿರಬೇಕು. ಇದು ಸಾಧ್ಯವಾಗದ ಹೊರತು ಸಮಾಜವು ಭೌತಿಕ ಕೊಳಗೇರಿಗಳಿಗಿಂತ ಕೀಳಾಗಿ ಮಾನವ ಕುಲ ಅಪಾಯದ ಅಂಚಿಗೆ ಸರಿಯುತ್ತದೆ. ಹೀಗಾಗಿ ಎಲ್ಲ ಕಾಲಕ್ಕಿಂತಲೂ ಇಂದಿನ ಶಿಕ್ಷಕರಿಗೆ ಅಂತಃಕರಣ, ನೈತಿಕತೆಯ ನಡವಳಿಕೆ ಅವಶ್ಯಕವಿದ್ದು, ಕ್ರಿಯಾಶೀಲ ಉದ್ದೇಶದೊಂದಿಗೆ ಸೃಜನಶೀಲ ಬದುಕಿಗೆ ಸದಾ ಹಾತೊರೆಯಬೇಕು. ಹೀಗಾಗುವಂತೆ ಮಾಡುವುದು ನಮ್ಮೆಲ್ಲರ ಹೊಣೆಗಾರಿಕೆಯು ಆಗಬೇಕು. ಶಿಕ್ಷಣವೆಂದರೆ ಬಿಡುಗಡೆ, ವಿಮೋಚನೆ, ವಿವೇಕ ಎಂಬರ್ಥಗಳಿವೆ. ಬಹುತೇಕ ಚಿಂತಕರ ದೃಷ್ಟಿಯಲ್ಲಿ ನರತ್ವದಿಂದ ವಿಮೋಚನೆಗೊಳ್ಳುವುದು ಮತ್ತು ವಿವೇಕ ನೀಡುವಂತದ್ದು ಶಿಕ್ಷಣವಾಗಿದೆ. ಇಂಥ ಶಿಕ್ಷಣ ಕ್ರಾಂತಿ ನಡೆಯಬೇಕಾದರೆ ನಮ್ಮಲ್ಲಿ ನಾವು ಅನೇಕ ಗುಣಗಳನ್ನು ಅಡಕಗೊಳಿಸಿಕೊಳ್ಳಬೇಕಿದೆ. ಇಂಥ ಗುಣಗಳನ್ನು ಶಿಕ್ಷಕರು ಸಮಾಜಕ್ಕೆ ನೀಡುವುದು ಇಂದು ಹೆಚ್ಚು ತುರ್ತು ಮತ್ತು ಅನಿವಾರ್ಯವು ಆಗಿದೆ. "ಅರಿವಿಟ್ಟು ಗುರುವಿಗೆ ಮೊದಲಾ ಸ್ಮರಿಸೋ ಸಿಗುವುದು ಸತ್ಫಲಾ" ಎಂದು ತಲೆ ಮೇಲೆ ಪುಸ್ತಕ ಗಂಟನ್ನು ಹೊತ್ತು ನಾಡಿನುದ್ದಕ್ಕೂ ತಿರುಗಿ ಹಾಡು ಕಟ್ಟಿದ ಸೂಫಿ ಸಂತ ಹಸನ್ ಷಾ ಅವರು ಅಭಿಪ್ರಾಯಿಸಿದ್ದಾರೆ.

ಜಪಾನಿ ಶಿಕ್ಷಣ ತಜ್ಞ ತ್ಸುನೆಸಾಬುರೋ ಮಕಿಗುಚಿಯು ತನ್ನ ಕೃತಿಯ ಮುನ್ನುಡಿ ಭಾಗದಲ್ಲಿ ಮೌಲ್ಯ ಸೃಷ್ಟಿಸುವ ಶಿಕ್ಷಣ "ಮಿತವ್ಯಯ ಮತ್ತು ದಕ್ಷತೆಯ ದೃಷ್ಟಿಯಿಂದ ಶಿಕ್ಷಣವನ್ನು ಕ್ರಮಬದ್ಧಗೊಳಿಸಬೇಕು. ಶಿಕ್ಷಣ ನೀತಿ ಮತ್ತು ಪ್ರಯೋಗಗಳ ಮಟ್ಟದಲ್ಲಿ ಸುಧಾರಣೆಗಳು ಆದರೆ ಈ ಹೊತ್ತಿನಲ್ಲಿ ಶಿಕ್ಷಣಕ್ಕೆ ಕೊಡುವ ಸಮಯ, ಅಭ್ಯಾಸಕ್ಕೆ ಕೊಡುವ ಸಮಯ, ಆರ್ಥಿಕ ವೆಚ್ಚ ಮೊದಲಾದವುಗಳನ್ನು ಅರ್ಧಕ್ಕೆ ಇಳಿಸಬಹುದು" ಎನ್ನುವ ಮೂಲಕ ಶಿಕ್ಷಣದ ಉದ್ದೇಶ ಆನಂದವಾಗಿರಬೇಕು. ಇದು ಸಾಮಾಜಿಕ ಪ್ರಜ್ಞೆಯ ಮೂಲಕ ನಡೆಸಬೇಕು. ಇದರಿಂದ ಸದ್ಗುಣ, ಆರೋಗ್ಯ ಮುಂತಾದವು ಬೆಳೆದು ಸಮಾಜ ಬೆಳೆಯಬೇಕು. ಶಿಕ್ಷಣದ ಮೂಲಕ ಶಿಕ್ಷಕರು ಮಾನವರನ್ನು ಸೃಷ್ಟಿಸಲಾಗುವುದಿಲ್ಲ. ಆದರೂ ಅವರು ಮೌಲ್ಯವನ್ನು ಸೃಷ್ಟಿಸಬೇಕು. ಇದರಿಂದ ಸಮಾಜದಲ್ಲಿ

ಸಾಮಾಜಿಕ ನ್ಯಾಯ, ಏಕತೆ ನಿರ್ಮಾಣವಾಗಿ ನಮ್ಮ ದೇಶ, ನಮ್ಮ ಪರಂಪರೆ ಎಂದು ಹೆಮ್ಮೆ ಪಡಬಹುದಾದ ಒಂದು ಸಾಮಾಜಿಕ ಸಂರಚನೆ ರೂಪಿತವಾಗುತ್ತದೆ. ಸಾಮಾಜಿಕ ನ್ಯಾಯ, ಆರ್ಥಿಕ ಪ್ರಗತಿ ಮತ್ತು ಮಾನವನ ಆತ್ಮದ ಸ್ವಾತಂತ್ರ್ಯ ಈ ಎಲ್ಲ ಆದರ್ಶಗಳನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿದ್ದೇವೆ. ಇವುಗಳನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಒದಗಿಸುವುದರ ಮೂಲಕ ಅವರಲ್ಲಿ ಮೌಲ್ಯ ಪ್ರಜ್ಞೆಯನ್ನು ರೂಢಿಸಬೇಕು.

**ಪರಾಮರ್ಶನ ಗ್ರಂಥಗಳು**


- ಮಹಾಬಲೇಶ್ವರ. (2010). *ಜ್ಞಾನಮ್ ವಿಜ್ಞಾನ ಸಹಿತಮ್.* ವಿಸ್ಮಯ ಪ್ರಕಾಶನ.
- ಮಹಾಮನೆ. (2008). ಸಂಚಿಕೆ 3. ಜೆಎಸ್ಎಸ್ ಪ್ರಕಾಶನ
- ಮಾಸ್ತಿ ವೆಂಕಟೇಶ ಅಯ್ಯಂಗಾರ್. (2003). *ಭಾರತೀಯ ವಿದ್ಯಾಭ್ಯಾಸ.* ಜೀವನ ಕಾರ್ಯಾಲಯ ಟ್ರಸ್ಟ್.
- ಒಡೆಯರ್ ಡಿ. ಹೆಗ್ಗಡೆ. (2006). *ಜಾಗತೀಕರಣ ಮತ್ತು ಸಾಂಸ್ಕೃತಿಕ ಆಯ್ಕೆ.* ಅರ್ಜುನ್ ಪಬ್ಲಿಸಿಂಗ್ ಹೌಸ್
- ರಾಜಶೇಖರ್ ಎಸ್. (2001). *ಭಾರತೀಯ ಸಮಾಜ.* ಭ್ರಮರ ಪ್ರಕಾಶನ
- ಸುಮತೀಂದ್ರ ನಾಡಿಗ. (ಅನು,) (2002). *ಸೃಷ್ಟಿಶೀಲ ಬದುಕಿಗಾಗಿ ಶಿಕ್ಷಣ.* ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯ.